ಕೇಳುವ ಪ್ರಮೇಯವಿಲ್ಲ. ಅದನ್ನು ಆಲಿಸುತ್ತಿದ್ದರೆ, ಭಾರತೀಯ ಕುಟುಂಬಗಳು ಯಾವೆಲ್ಲ ಸಮಸ್ಯೆಗಳಿಂದ ನಲುಗುತ್ತಿವೆ ಎಂಬ ಸ್ಥೂಲಚಿತ್ರ ಸಿಗುತ್ತದೆ. ತನ್ನ ಫೋನುಕರೆ ಸ್ವೀಕಾರ ಮಾಡದ ಪ್ರೇಯಸಿಯನ್ನು ತರಾಟೆಗೆ ತೆಗೆದುಕೊಳ್ಳುವ ಹುಡುಗ; ಹಾಸ್ಟೆಲಿನಲ್ಲಿರುವ ಮಗನಿಗೆ ಬುದ್ಧಿವಾದ ಹೇಳುತ್ತಿರುವ ತಂದೆ; ದೂರದಲ್ಲಿರುವ ತಂದೆಗೆ ತನ್ನ ಹಣಕಾಸಿನ ಕಷ್ಟದ ಬಗ್ಗೆ ಸುಳ್ಳೇ ಕರುಣೆ ಹುಟ್ಟಿಸುತ್ತಿರುವ ವಿದ್ಯಾರ್ಥಿ; ಮೊಮ್ಮಕ್ಕಳ ಜೊತೆ ಮಾತಾಡುತ್ತಿರುವ ಅಜ್ಜಿ – ಒಂದೇ ಎರಡೇ. ಅದೊಂದು ಸಂಜೆ ಉತ್ತರ ಭಾರತದ ವಿದ್ಯಾರ್ಥಿಯೊಬ್ಬ – ಬಹುಶಃ ಮನಮೆಚ್ಚಿದ ಹುಡುಗಿ ತನ್ನ ನಿರ್ಧಾರ ಬದಲಿಸಿರಬೇಕು – 'ಸೋನೂ, ಮೇರೇ ಮೆ ಕ್ಯಾ ಕಮಿಥೀ?' ಎಂದು ಆರ್ತವಾಗಿ ರೋದಿಸುತ್ತಿದ್ದ. ನಾನು ಹೋಗುವಾಗ ಮೊರದಗಲ ಮುಖ ಮಾಡಿಕೊಂಡು ಮಾತಾಡುತ್ತಿದ್ದವ, ಅತ್ತಿಂದ ಬರುವಾಗ ಯಕ್ಷಗಾನ ಕುಣಿಯುತ್ತಿದ್ದ. ಅರ್ಧಗಂಟೆಯೊಳಗೆ ಏನಾಯಿತೋ ಯಾವಂಬಲ್ಲ? ನಿಮಿಷ ಸಾಲದೇ ಜೀವನವು ನಾಟಕೀಯ ತಿರುವು ಪಡೆಯಲು? ಒಮ್ಮೆ ಒಬ್ಬ ಮಧ್ಯವಯಸ್ಕರು, ಕತ್ತಲಾದರೂ ಮನೆಗೆ ಹೋಗದೆ ತಿರುಗಾಡುತ್ತ, ಮಹಾತ್ಮರ ನುಡಿಮುತ್ತು ಉಲ್ಲೇಖಿಸುತ್ತ ಯಾರಿಗೊ ಹಿತವಚಿಸುತ್ತಿದ್ದರು. ಅದೊಂದು ಸಂಶಯ ನಿವಾರಣ ಕಾರ್ಯಕ್ರಮ. ಅತ್ತಕಡೆ – ಬಹುಶಃ ಅಳಿಯದೇವರೇ ಇರಬೇಕು – 'ನಿಮ್ಮ ಮಗಳು ಯಾವಾಗಲೂ ಮೊಬೈಲಲ್ಲೇ ಇರುತ್ತಾಳೆ' ಎಂದು ಆಕ್ಷೇಪಿಸಿರಬೇಕು. ಇತ್ತಕಡೆ ಇವರು 'ಫ್ರೆಂಡ್ಸ್ ಎಂದರೆ ಬಾಯ್‌ಫ್ರೆಂಡ್ಸ್ ಎಂದೇಕೆ ತಿಳೀತೀರಿ? ಗರ್ಲ್‌ಫ್ರೆಂಡೂ ಇರಬಹುದಲ್ಲ, ಅನುಮಾನ ಮಾಡಬೇಡಿ. ಒಂದು ಮಗುವಾದರೆ ಎಲ್ಲ ಸರಿಹೋಗುತ್ತೆ' ಎಂದು ಸಾಂತ್ವನ ಹೇಳುತಿದ್ದರು. ನಮ್ಮ ಕಾಲುವೆಯಲ್ಲಿ ಅದೆಷ್ಟು ನೀರು ಹರಿದಿದೆಯೊ?

ದಂಡೆಯ ಮೇಲೆ ವಾಕಿಂಗ್ ಬಂದವರು ಸಭೆ ನಡೆಸುವ ಪದ್ಧತಿಯಿದೆ. ಇವರನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಬಹುದು. ಒಂದು, ನಡುವಯಸ್ಕರ ಅಸೆಂಬ್ಲಿ. ಇಲ್ಲಿ ಪೇಟೆಧಾರಣೆ, ಮಂತ್ರಿ ಮನೆಯ ರೈಡು, ಮಕ್ಕಳು ಕೆಡುತ್ತಿರುವುದು, ಮೊಬೈಲ್‌ಹುಚ್ಚು, ಮೀಸಲಾತಿಯ ಪರಿಣಾಮ, ಇತ್ಯಾದಿ ಪ್ರಚಲಿತ ವಿದ್ಯಮಾನಗಳ ವಿಶ್ಲೇಷಣೆ ಜರುಗುವುದು. ರಾಜಕಾರಣದ ವಿಷಯ ಬಂದಾಗ ಪರ–ವಿರೋಧ ಗಲಭೆಯಾಗಿ ಸಭೆಯ ತಾಪಮಾನ ಏರುವುದು. ಕೊನೆಯಲ್ಲಿ ಸ್ವಾಮಿ ಕ್ಯಾಂಟೀನಿಗೆ ನುಗ್ಗಿ ವಗ್ಗಾಣಿ ತಿಂದು, ಬೈಟು ಚಹ ಹೀರಿ ಗುಂಪು ತಣ್ಣಗೆ ಮನೆಗೆ ತೆರಳುವುದು.

ಎರಡನೆಯದು, ಹಿರಿಯರ ಪರಿಷತ್ತು. ಸಂಜೆಯ ತಂಪಿಗೆ ಮನೆಬಿಡುವ ಇದರ ಸದಸ್ಯರು, ರೈಲ್ವೇಕ್ರಾಸಿಂಗ್ ಬಳಿಯಿರುವ ಕಟ್ಟೆಯ ಮೇಲೆ ಪದ್ಮಾಸನದಲ್ಲಿ ಕೂತು, ವಿರಾಮದಲ್ಲಿ ಮಾತುಕತೆ ನಡೆಸುವವರು. ಇವರಿಗೂ ರೈಲ್ವೆಗೂ ಯಾವ ನಂಟೋ ಏನು ಕತೆಯೋ? ನಿಲ್ದಾಣದ ಎಲ್ಲ ಕಟ್ಟೆಗಳನ್ನು ಇವರು ವಶಪಡಿಸಿಕೊಂಡಿರುತ್ತಾರೆ. ಇವರ ಚರ್ಚೆಯ ವಸ್ತು, ತಮ್ಮ ಇತ್ತೀಚಿನ ಆರೋಗ್ಯ, ಅಧ್ಯಾತ್ಮದ ಸಾಧನೆ, ಮಗನ ಪ್ರಗತಿ, ಮೊಮ್ಮಕ್ಕಳ ಚಟುವಟಿಕೆ, ಸತ್ತಮಡದಿಯ ನೆನಪು, ಸೊಸೆಯ ಸೊಕ್ಕು, ಪ್ರಸಕ್ತ ರಾಜಕಾರಣದ ಅಧೋಗತಿ ಇತ್ಯಾದಿ. ಇಲ್ಲಿ ವಾಗ್ವಾದಕ್ಕೆ ಬಿಸಿಯಿಲ್ಲ. 'ಲೋಕದ ಡೊಂಕನ್ನು ಸರಿಪಡಿಸಲು ಸಾಧ್ಯವಿಲ್ಲ; ದೇಶ ಸುಧಾರಿಸಬೇಕಾದರೆ ಮಿಲಿಟರಿ ರೂಲ್ ಬರಬೇಕು' ಎಂಬ ಠರಾವಿನೊಂದಿಗೆ ಸಭೆ ಬರಖಾಸ್ತು ಆಗುವುದು. ಇವರಲ್ಲೇ ಕೆಲವರು ಮೊಮ್ಮಕ್ಕಳನ್ನು ಕರೆತಂದಿರುವರು. ಇವರು ಹರಿವ ನೀರನ್ನೊ, ಹಾರುಹಕ್ಕಿಯನ್ನೊ, ಕಾಲುವೆಯ ಮೇಲೆ ಢಗಾಢಗ್ ಹಾಯುವ ರೈಲುಗಾಡಿಯನ್ನೊ

'ಫ್ರೆಂಡ್ಸ್ ಎಂದರೆ ಬಾಯ್‌ಫ್ರೆಂಡ್ಸ್ ಎಂದೇಕೆ ತಿಳೀತೀರಿ? ಗರ್ಲ್‌ಫ್ರೆಂಡೂ ಇರಬಹುದಲ್ಲ, ಅನುಮಾನ ಮಾಡಬೇಡಿ. ಒಂದು ಮಗುವಾದರೆ ಎಲ್ಲ ಸರಿಹೋಗುತ್ತೆ' ಎಂದು ಸಾಂತ್ವನ ಹೇಳುತಿದ್ದರು. ನಮ್ಮ ಕಾಲುವೆಯಲ್ಲಿ ಅದೆಷ್ಟು ನೀರು ಹರಿದಿದೆಯೊ?

ತೋರಿಸುತ್ತ, ಅವು ಬಾಲಭಾಷೆಯಲ್ಲಿ ಕೇಳುವ ನೂರೆಂಟು ಪ್ರಶ್ನೆಗಳಿಗೆ ಉತ್ತರಿಸುವರು. ಮುಪ್ಪು ತನ್ನ ಅವಸ್ಥೆಯನ್ನು ಎಳೆಯರ ಸಂಗದಲ್ಲಿ ಮರೆಯುವ ಇದೊಂದು ತಲೆಮಾರುಗಳ ಅಪೂರ್ವ ಮಿಲನ.

ಮೂರು, ಹಿರಿಯ ಮಹಿಳಾ ಮಂಡಳಿ. ಇದರ ಸದಸ್ಯರು ಕ್ಷಿಪ್ರವಾಗಿ ವಾಕಿಂಗ್ ಮುಗಿಸಿ, ಸುಂಕಲಮ್ಮ ಗುಡಿಯ ಮುಂದಣ ಕಲ್ಲುಬೆಂಚುಗಳ ಮೇಲೆ ಸೇರುವರು. ಅತ್ತೆಯರೇ ಹೆಚ್ಚಿರುವ ಈ ಮಂಡಳಿಯ ಚರ್ಚೆ ಸೊಸೆ. ಗುಂಪಿನಲ್ಲಿ ಯಾರಾದರೂ ಒಬ್ಬರು 'ಏನ್ ನಡಸ್ಯಾಳ್ರೀ ಸೊಸಿ?' ಎಂದು ಕೇಳಿದರೆಂದರೆ, ಅದು ಸೊಸೆ ಮರ್ದನಕ್ಕೆ ಹಾಕುತ್ತಿರುವ ಪೀಠಿಕೆಯೆಂದು ತಿಳಿಯತಕ್ಕದ್ದು. ಈ ಪ್ರಶ್ನೆಗೇ ಕಾಯುತ್ತಿದ್ದ ಮತ್ತೊಬ್ಬರು 'ನೆನ್ನಿ ಮೈಯಾಗ ಆರಾಮಿಲ್ಲ ಅಂತ ದವಾಖಾನಿಗೆ ಗಂಡನ್ನ ಮಕ್ಕಳನ್ನ ಕರಕೊಂಡು ಹೋಗಿದ್ದಳ್ರೀ. ಹೋದೋರು ನೈವೇದ್ಯಂದೊಳಗ ಹೊಟ್ಟೆತುಂಬ ತಿಂದು ಕಣ್ತುಂಬ ಪಿಚ್ಚರ್ ನೋಡಿ ಬಂದಾರ್ರಿ. ಮೊಮ್ಮಗಳ ಬಾಯಿಬಿಡಿಸಿದೆ. ಗೊತ್ತಾತ. ನಾವೇನು ತಿನಬ್ಯಾಡ ನೋಡಬ್ಯಾಡ ಅಂತಿವೇನ್ರಿ? ಆಕಿ ಗಂಡ ದುಡಿತಾನ, ತಿಂತಾಳ. ನಾವ್ಯಾರ್ರೀ ನಡಬರಕ? ನಮ್ಮ ಮೇಟಿ ಗಟ್ಟಿಯಿದ್ರೆ ಆಕಳ ಹದ್ದುಬಸ್ತು ಇರ್ತಿತ್ತು... ಏನ್ಮಾಡೋದರಿ ಪಡಕೊಂಡು ಬಂದದ್ದು ಅನುಭವಿಸಬೇಕು' ಎಂದು ಮಾರುತ್ತರಿಸುವರು. ಅಸೂಯೆ, ಸಿಟ್ಟು, ಅಪಮಾನ ಭಾವದಿಂದ ಶುರುವಾಗುವ ಮಾತು, ವಿಷಾದಯೋಗದಲ್ಲಿ ಮುಗಿಯುವುದು.

ನಾಲ್ಕು, ನಡುಪ್ರಾಯದ ವನಿತಾ ಗೋಷ್ಠಿ – ಬಾನು ಇದರ ಸದಸ್ಯೆ. ಇಲ್ಲಿನ ಚರ್ಚೆಯ ಅಜೆಂಡಾ ಅಡುಗೆ, ಬಟ್ಟೆಬರೆ, ಕೆಲಸದವಳ ಸಮಸ್ಯೆ, ಮಕ್ಕಳಶಾಲೆ, ಗಂಡಸರ ದುರಭ್ಯಾಸ, ಯಾವನೋ ತಿರಬೋಕಿ ಚಿತ್ರನಟನೊಬ್ಬನ ಮೈಕಟ್ಟು. 'ಯಾಕ್ರೀ ಇವತ್ತು ಸುಮಂಗಲಾ ಬರಲಿಲ್ಲ?', 'ಆಕಿಗೆ ಮೈಗ್ ಆರಾಮಿಲ್ಲಂತರಿ?', 'ಏನಾಗೀತತ್‌ಓ... ಮೊನ್ನಿನ್ನೂ ಸಿಕ್ಕಿದ್ದಳು ಬಜಾರದಾಗ?' (ಎದುರಾಕೆ ಸಣ್ಣದನಿಯಲ್ಲಿ ಗುಸುಗುಸು ಎನ್ನಲು), 'ಹೌದೇನ್ರೀ? ಮಳ್ಳಿ ಹಂಗಿದ್ದಳು. ನನಗೆ ಗೊತ್ತೇ ಆಗಲಿಲ್ಲ ನೋಡ್ರಿ' ಎಂಬ ವಿಸ್ಮಯಭಾವವೂ, ಎಲ್ಲ ಮುಗಿದ ಬಳಿಕ 'ಹೋಗ್ಲಿಬಿಡ್ರಿ, ಕಂಡವರ ಸುದ್ದಿ ನಮಗ್ಯಾಕೆ' ಎಂಬ ವಿರಕ್ತಿಯೂ ಪ್ರಕಟವಾಗುವುದು. ಇವರಲ್ಲಿ ಕೆಲವರು ಚಿಕ್ಕದಾಗಿ ಪಾಕ ತರಗತಿ ಆರಂಭಿಸುವರು. ದೋಸೆಹಿಟ್ಟು ಚೆನ್ನಾಗಿ ಹುದುಗಬೇಕಾದರೆ ಏನು ಮಾಡಬೇಕೆಂದು ಚರ್ಚೆ ಆರಂಭಗೊಂಡು, ಯಾವ್ಯಾವ ಬೇಳೆ ಸೇರಿಸಿ ರುಬ್ಬಿದರೆ ದೋಸೆ–ಇಡ್ಲಿ ಹೇಗೆ ರುಚಿಪಡೆಯುತ್ತದೆ ಎಂಬಲ್ಲಿಗೆ ಬೆಳೆಯುವುದು. ದಿನವೂ ಅಟ್ಟು ಬೇಸತ್ತಿರುವ ಒಬ್ಬಾಕೆ ನಡುವೆ ಬಾಯಿಹಾಕಿ 'ನಾವೆಷ್ಟನಾ ಮಾಡಲಿ, ಸಾಯಿಪ್ರಕಾಶ್ ಥರ ಬರಂಗಿಲ್ಲರಿ. ಅಲ್ಲಿನ ಇಡ್ಲಿದೋಸೆ ಅಂದರ ಮಲ್ಲಿಗೆಹೂವು' ಎಂದು ಅಂತಿಮ ತೀರ್ಪು ನೀಡುವರು. ತಿಂಡಿಯ ಪ್ರಸ್ತಾಪವು ಹೊಟ್ಟೆಯನ್ನು ಚುರುಗುಟ್ಟಿಸಲು, 'ಅಯ್ಯೋ! ಮಕ್ಕಳಿಗೆ ಬುತ್ತಿ ಕಟ್ಟಬೇಕ್ರೀ, ಎಂಟಕ್ಕೇ ಸಾಲಿ' ಎನ್ನುತ್ತ ಗೋಷ್ಠಿ ವಿಸರ್ಜನೆಗೊಂಡು ಮನೆಯತ್ತ ಧಾವಿಸುವುದು.

ಹೀಗೆ ದಿನವಿಡೀ ಬಗೆಬಗೆಯ ಪದಾಘಾತ ವಾಕ್‌ಘಾತಗಳಿಗೆ ನಲುಗಿದ ಕಾಲುವೆ ದಂಡೆ, ಮುಸ್ಸಂಜೆ ಹೊತ್ತಿಗೆ ಬಯಲ ಬಾರಾಗಿ, ಪ್ರೇಮಿಗಳ ಬೃಂದಾವನವಾಗಿ ರೂಪಾಂತರ ಹೊಂದುವುದು. ಮನೆಯಲ್ಲಿ ಪಾನಗೋಷ್ಠಿಗೆ ಸ್ವಾತಂತ್ರ್ಯವಿಲ್ಲದವರೋ, ಬಾರಿಗೆ ಹೋಗಲು ಕಸುವಿಲ್ಲದವರೋ, ಚಿಕನ್ ಕಬಾಬ್–ಕಿಂಗ್‌ಫಿಶರ್ ಸಮೇತ ಆಗಮಿಸುವರು. ಹೊಂಗೆಮರದಡಿಯಲ್ಲಿ ಪಾನಗೋಷ್ಠಿ ಮಾಡುವರು. ಬೈಕಿನಲ್ಲಿ ಬರುವ ಪ್ರೇಮಿಗಳು ಮರಗಳ ಹಿಂದೆ ಮರೆಯಾಗುವರು. ಈ ಪ್ರೇಮಿಗಳ ಬಗ್ಗೆ ನನಗೆ ಚೂರೂ ಸಹಾನುಭೂತಿ ಇರಲಿಲ್ಲ. ಅದೊಂದು ಕೆಟ್ಟಸಂಜೆ. ದಂಡೆಯ ಮೇಲಿದ್ದ ಉಸುಕಿಗೆ ಸ್ಕೂಟರು ಸ್ಕಿಡ್ಡಾಗಿ, ಹೋಯೆಂದು ಅರಚಿಕೊಂಡು ಬಿದ್ದೆ. ಗಾಡಿ ತೊಡೆಯ

